ಮಲಗಿದ್ದರು. ಆತ ದೂರದಿಂದಲೇ ನೋಡಿ, ಮುಖ ತಿರುಗಿಸಿದರು. ಯಾವುದೋ ಆಸ್ಪತ್ರೆಯಲ್ಲಿ ಬೆಳ್ಳಗೆ, ಶುಭ್ರವಾಗಿ, ಸಾಲಾಗಿ ಮಲಗಿಸಿದ್ದಾಗ ಬಿಟ್ಟರೆ, ಅಷ್ಟು ಬೆತ್ತಲಾಗಿ ಮನುಷ್ಯ ನೋಯುವುದನ್ನು ಅವರೆಂದೂ ನೋಡಿದ್ದಿಲ್ಲ. ಅವರ ಹೊಟ್ಟೆ ತೊಳಸಿತು. ಹಿಂದಕ್ಕೆ ತಿರುಗಿದರು.

ಟಿಕೆಟ್ಟು ಕೊಡುವ ಕೋಣೆ ಸಂಪೂರ್ಣ ಕುಸಿದಿತ್ತು. ಕೊಠಡಿಯ ಬಾಗಿಲುಗಳು ಎಲ್ಲಿಯೂ ಕಾಣಿಸಲಿಲ್ಲ. ಒಳಗಿನ ಕುರ್ಚಿ ಮೇಜುಗಳು ಚದುರಿ ಬಿದ್ದಿದ್ದವು. ನಿರೀಕ್ಷಣಾ ಕೊಠಡಿ ಕುಸಿದಿದ್ದರೆ ಏನಾಗಿರುತ್ತಿತ್ತು ಎಂದು ಅಂದುಕೊಂಡರು. ಆ ಕಲ್ಲೋಲವನ್ನೆಲ್ಲ ಶೂನ್ಯವಾಗಿ ನೋಡುತ್ತ ಅವರು ನಿಂತುಬಿಟ್ಟರು.



ಒಳಗಿನ ಕತ್ತಲೆಗೆ ಕಣ್ಣು ಹೊಂದಿಕೊಂಡ ನಂತರ, ಆ ವಸ್ತುವಿನ ಕೆಳಗೆ ಯಾವುದೋ ದೇಹ ಅಸ್ಪಷ್ಟವಾಗಿ ಕಂಡಿತು. ಟಾರ್ಚ್ ಬೆಳಗಿಸಿ ನೋಡಿದರು. ತಿರುಕಿ!

ಅವರು ಸಹಿಸದಾದರು. ಬಾಗಿ ಹಣೆ ಮುಟ್ಟಿ ನೋಡಿದರು. ತಣ್ಣಗಿತ್ತು. ಸತ್ತುಹೋಗಿದ್ದಳು. ಕೈಗಳೆರಡೂ ಹೋಗಿದ್ದವು. ಕೆಳಭಾಗ ಸಂಪೂರ್ಣ ನಲುಗಿ ಹೋದಂತಿತ್ತು. ಒಂದು ಕೈಯಲ್ಲಿ ಅವರ ಪರ್ಸ್ ಇತ್ತು. ಇನ್ನೊಂದು ಕೈಯಲ್ಲಿ ಕೆಲವು ನೋಟುಗಳು, ಸ್ವಲ್ಪ ಚಿಲ್ಲರೆಯಿತ್ತು. ಬಹುಶಃ ಟಿಕೆಟ್ಟು ಮಾರಿದ ಹಣವಾಗಿದ್ದೀತು. ಗುಮಾಸ್ತೆ ಆ ಹಣವನ್ನು ಡ್ರಾಯರಿನಲ್ಲಿಟ್ಟು ರಾತ್ರಿ ಅವಸರವಾಗಿ ಮನೆಗೆ ಹೋಗಿದ್ದಾನು.

ರಾವು ಅವರು ಆಕಸ್ಮಿಕವಾಗಿ ಚಿಕ್ಕ ಹುಡುಗನಂತೆ ಅಳತೊಡಗಿದರು. ತಣ್ಣನೆಯ ಆ ಹಣೆಗೆ ಮುತ್ತಿಟ್ಟರು. ಕಳೆದ ರಾತ್ರಿಯ ಪ್ರತಿಯೊಂದು ಸಣ್ಣ ಸಂಗತಿಯೂ ಅವರಿಗೆ ಮತ್ತೆ ಮತ್ತೆ ನೆನಪಿಗೆ ಬಂದಿತು. ತನಗೆ ಆತ್ಮಸ್ಥೈರ್ಯವನ್ನು, ಶಾಂತಿಯನ್ನು, ಚಂಡಮಾರುತಕ್ಕೆ ತಾಳಿಕೊಳ್ಳುವ ಶಕ್ತಿಯನ್ನು ತಂದ ಆ ಮೂರ್ತಿ ಅಲ್ಲಿ ಬಿದ್ದಿದೆ. ಆ ಗಾಳಿಮಳೆಗೆ ಅವಳು ಬಲಿಯಾಗಿ ಹೋಗಿದ್ದಾಳೆ! ಅವರ ಹೃದಯ ಬಿರುಗಾಳಿಯಲ್ಲಿನ ಸಾಗರದಂತೆ ಆವೇದನೆಯಿಂದ ಉಕ್ಕಿತು. ತನಗೆ ಜೀವನದಲ್ಲುಳಿದ ಒಂದು ಆನಂದವೂ ಶಾಶ್ವತವಾಗಿ ಹೋಗಿಬಿಟ್ಟಂತೆ ಅವರಿಗೆ ಅನ್ನಿಸಿತು. ತನ್ನ ಪರ್ಸನ್ನು ಕದ್ದುದಕ್ಕಾಗಲಿ, ಅಷ್ಟು ಗಾಳಿಮಳೆಯಲ್ಲಿ ಹಣವೇನಾದರೂ ಸಿಕ್ಕಿದರೆ ತೆಗೆದುಕೊಳ್ಳಬಹುದೆಂದು ಟಿಕೆಟ್ಟು ಮಾರುವ ಕೋಣೆಗೆ ಹೋದುದಕ್ಕಾಗಲೀ ಅವರು ಮನಸ್ಸಿನಲ್ಲಿಯೂ ಅವಳನ್ನು ದೂಷಿಸಲಿಲ್ಲ.

ಅವಳ ಕಡೆಯ ಭಾವ ಅವರಿಗೆ ಗೊತ್ತು. ಈಗ ಅವಳ ತುಂಟತನಗಳು ಅವರಿಗೆ ಪ್ರೀತಿಪಾತ್ರವಾದವು. ಅವರಲ್ಲಿ ಆಳವಾಗಿ ಮರೆಗೊಂಡಿದ್ದ ಮಾನವೀಯತೆಯನ್ನು ಈ ಜೀವಿ ಅರಳಿಸಿದ್ದಳು. ಅವರ ಮಡದಿಯಾಗಲಿ, ಮಕ್ಕಳಲ್ಲಿ ಯಾರೇ ಆಗಲಿ, ಅವಳು ಬಂದಷ್ಟು ಹತ್ತಿರ ಬರಲಿಲ್ಲ.

ತಮ್ಮ ಮೌಲ್ಯಗಳು, ನಿಯಮಗಳು, ಧರ್ಮಚಿಂತನೆ, ವೇದಾಂತ ಎಲ್ಲವನ್ನೂ ತ್ಯಜಿಸುತ್ತಾರವರು, ಈ ವ್ಯಕ್ತಿಗೆ ಪ್ರಾಣ ಕೊಡುವುದಾದರೆ.

ಹೊರಗೆ ಜನ ಬರುತ್ತಿರುವ ಸಪ್ಪಳ ಕೇಳಿಸಿತು. ರಾವು ಅವರು ಕಣ್ಣೊರೆಸಿಕೊಂಡು ಒಂದು ಕ್ಷಣ ಆಲೋಚಿಸುತ್ತ ನಿಂತರು. ನಂತರ ಒಂದು ನಿಶ್ಚಯದಿಂದ ಅವಳ ಬೆರಳುಗಳ ಸಂದಿಯಿಂದ ಹಣ ತೆಗೆದು, ತೆರೆದಿದ್ದ ಡ್ರಾಯರಿನಲ್ಲಿರಿಸಿ ಮುಚ್ಚಿದರು. ಆದರೆ ತಮ್ಮ ಪರ್ಸನ್ನು ಅವಳ ಕೈಯಿಂದ ಬಿಡಿಸಲು ಅವರ ಮನಸ್ಸು ಸಮ್ಮತಿಸಲಿಲ್ಲ. ತನಗೆ ಸಂಬಂಧಿಸಿದ ಯಾವುದೋ ಒಂದು ಗುರುತಾಗಿ ಅವಳ ದೇಹದೊಂದಿಗೆ ಇರಬೇಕೆಂದು ಅವರಿಗನ್ನಿಸಿತು. ಆದರೆ ಇತರರು ಅವಳು ಕಳ್ಳತನ ಮಾಡಿದಳೆಂದು ಅಂದುಕೊಂಡರೆ ಅವರು ಸಹಿಸಲಾರರು. ಆದುದರಿಂದ ಎಚ್ಚರಿಕೆಯಿಂದ ಆ ಪರ್ಸಿನಿಂದ ತಮ್ಮ ಹೆಸರಿದ್ದ ಕಾರ್ಡನ್ನು ತೆಗೆದು ಭಾರವಾದ ಹೃದಯದಿಂದ ಅಲ್ಲಿಂದ ಹೊರಟು ಹೋದರು.

●